ಕುವೆಂಪು ವಿಶ್ವವಿದ್ಯಾಲಯ
ಕುಲಸಚಿವ(ಪರೀಕ್ಷಾಂಗ)ರವರ ಕಛೇರಿ.
ಜ್ಞಾನಸಹ್ಯಾದ್ರಿ, ಶಂಕರಘಟ್ಟ–577451
ಫೋನ್ ನಂಬರ್: 08282–256166, ಇ–ಮೇಲ್: regexamku@gmail.com, ವೆಬ್‌ಸೈಟ್: www.kuvempu.ac.in
Re-Accredited by NAAC with 'A' Grade, Ranked 73rd Place in NIRF– 2019 and Secured 45th Place in SCIMAGO Institutional Rankings

ಸಂಖ್ಯೆ:ಕುವಿ:ಪವಿ:ಯುಜಿ–3: 8808 :2023-24 ದಿನಾಂಕ: 29–02–2024

# ಸುತ್ತೋಲೆ

ವಿಷಯ: ವೀಕ್ಷಕರು/ಜಾಗೃತದಳದ ಸದಸ್ಯರಾಗಿ ನೇಮಕಗೊಂಡ ತಮ್ಮ ಕಾಲೇಜಿನ ಅಧ್ಯಾಪಕರನ್ನು ಸದರಿ ಕರ್ತವ್ಯಕ್ಕೆ ಕಡ್ಡಾಯವಾಗಿ ಹಾಜರಾಗುವಂತೆ ಸೂಚಿಸುವ ಕುರಿತು.

*****

ದಿನಾಂಕ 27–02–2024ರಿಂದ ನಡೆಯುತ್ತಿರುವ ಎಲ್ಲಾ ಸ್ನಾತಕ (NEP & Non-NEP) ಪದವಿ ಪರೀಕ್ಷೆಗಳಿಗೆ ವೀಕ್ಷಕರು/ಜಾಗೃತದಳದ ಸದಸ್ಯರಾಗಿ ತಮ್ಮ ಕಾಲೇಜಿನಿಂದ ನೇಮಕಗೊಂಡ ಅಧ್ಯಾಪಕರನ್ನು ಸದರಿ ಪರೀಕ್ಷಾ ಕರ್ತವ್ಯಕ್ಕೆ ತಕ್ಷಣದಿಂದ ಹಾಜರಾಗುವಂತೆ ಸೂಚಿಸಲು ಈ ಮೂಲಕ ತಿಳಿಸಲಾಗಿದೆ. ಕೆಲವು ಕಾಲೇಜುಗಳ ಅಧ್ಯಾಪಕರು ಸದರಿ ಪರೀಕ್ಷಾ ಕರ್ತವ್ಯಕ್ಕೆ ಹಾಜರಾಗದೇ ಇರುವುದು ಹಾಗೂ ಕೆಲವು ಕಾಲೇಜುಗಳ ಪ್ರಾಂಶುಪಾಲರು ಕಾಲೇಜಿನ ನ್ಯಾಕ್ ಮತ್ತು ಇತರೆ ಕೆಲಸದ ನಿಮಿತ್ತ ವೀಕ್ಷಕರು/ಜಾಗೃತದಳದ ಕರ್ತವ್ಯಕ್ಕೆ ನೇಮಕಗೊಂಡ ಅಧ್ಯಾಪಕರಿಗೆ ಸದರಿ ಕರ್ತವ್ಯದಿಂದ ವಿನಾಯಿತಿ ನೀಡಲು ಕೇಳಿಕೊಂಡಿರುವುದು ಕಂಡುಬಂದಿರುತ್ತದೆ. ಒಂದು ವೇಳೆ ತಮ್ಮ ಕಾಲೇಜಿನ ನ್ಯಾಕ ಮತ್ತು ಇತರೆ ತುರ್ತು ಕಾರ್ಯಗಳಿಗೆ ಈಗಾಗಲೇ ತಮ್ಮ ಕಾಲೇಜಿನಿಂದ ವೀಕ್ಷಕರು/ಜಾಗೃತದಳದ ಸದಸ್ಯರಾಗಿ ನೇಮಕಗೊಂಡ ಅಧ್ಯಾಪಕರ ಅವಶ್ಯಕತೆ ಇದ್ದಲ್ಲಿ, ಅಂತಹ ಅಧ್ಯಾಪಕರ ಬದಲಿಗೆ ತಮ್ಮ ಕಾಲೇಜಿನ ಬೇರೊಬ್ಬ ಅಧ್ಯಾಪಕರ ಹೆಸರನ್ನು ಸೂಚಿಸಿದಲ್ಲಿ ಮಾತ್ರ ವಿನಾಯಿತಿ ನೀಡಲಾಗುವುದು. ಕರ್ನಾಟಕ ವಿಶ್ವವಿದ್ಯಾಲಯದ ಕಾಯ್ದೆ 2000 ಸೆಕ್ಷನ್ (73) ಮತ್ತು (74)ರನ್ವಯ ಪರೀಕ್ಷಾ ಕಾರ್ಯವು ಕಡ್ಡಾಯವಾಗಿರುವುದರಿಂದ ಕಾಲೇಜಿನಲ್ಲಿನ ನ್ಯಾಕ್ ಮತ್ತು ಇತರೆ ಕಾರ್ಯಗಳಿಗೆ ವಿನಾಯಿತಿ ನೀಡಲಾಗುವುದಿಲ್ಲ. ಆದುದರಿಂದ ಈಗಾಗಲೇ ವಿಶ್ವವಿದ್ಯಾಲಯದಿಂದ ನೇಮಕಗೊಂಡ ಅಧ್ಯಾಪಕರು ನೇಮಿಸಿದ ಕರ್ತವ್ಯಕ್ಕೆ ಕಡ್ಡಾಯವಾಗಿ ಹಾಜರಾಗುವಂತೆ ಸೂಚಿಸಲು ತಿಳಿಸಲಾಗಿದೆ.

1/03/24

ಕುಲಸಚಿವರು(ಪರೀಕ್ಷಾಂಗ)
ಕುಲಸಚಿವ (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577451, ಶಿವಮೊಗ್ಗ ಜಿಲ್ಲೆ

ಗೆ,

ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಸ್ನಾತಕ ಪದವಿ ಕಾಲೇಜುಗಳ ಪ್ರಾಂಶುಪಾಲರಿಗೆ

ಪ್ರತಿಗಳು:

1. ಕಛೇರಿ ಪ್ರತಿ.

Scanned with OKEN Scanner